3) ಮಮದಾಪೂರ ರೂ. 30.00 ಲಕ್ಷ
4) ರೋಣಿಹಾಳ್ ರೂ. 15.00 ಲಕ್ಷ

ಅನುಬಂಧ

ಕ್ರ. ಸಂ	ಕೆರೆಯ ಹೆಸರು	ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ
1)	ಕೊಡಗಿ ಕೆರೆ	132
2)	ಅರಳೀಚಂಡಿ ಕೆರೆ	104
3)	ಮಸೂತಿ ಕೆರೆ	59
4)	ಅಸಂಗಿ ಕೆರೆ	180
5)	ಮಲಷೂಣ ಕೆರೆ	88
6)	ನಾಗವಾಡ ಕೆರೆ	100
7)	ಗರಸಂಗಿ ಜಿನಗು ಕೆರೆ	196
8)	ಮನಗೊಳಿ ಜಿನಗು ಕೆರೆ	61
9)	ಮುತ್ತಗಿ ಕೆರೆ ಜಿನಗು ಕೆರೆ	40
10)	ತಳೇವಾಡ ಜಿನಗು ಕೆರೆ	40
11)	ಮಲಷೂಣ ಕೆರೆ	40
12)	ಕಿರಿಜ್ಯಾಳ	375
13)	ಸುಳಿಖೋಡ	271
14)	ರೋಣಿಹಾಳ	288
15)	ಕೊಪಕಡ್ಡಿ	304
16)	ಕಾತ್ರಾಳ	582
17)	ಮಮಗಾಪೂರ (ಸಣ್ಣದು)	60
18)	ಮಮದಾಪೂರ (ದೊಡ್ಡದು)	257
		3177

ರಾಜ್ಯದಲ್ಲಿ ರೈಲು ಮಾರ್ಗಗಳ ಗೇಜ್ ಪರಿವರ್ತನೆ ಕಾಮಗಾರಿ

1003 (1267) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈಲು ಮಾರ್ಗದ ಗೇಜ್ ಪರಿವರ್ತನೆಗಾಗಿ ಗುರುತಿಸಿರವ ಮಾರ್ಗಗಳಾವುವು;

ಆ) ಗೇಜ್ ಪರಿವರ್ತನೆಗಾಗಿ ಈಗಾಗಲೇ ಮಾರ್ಗ ಗುರುತಿಸಿ ಕಾಮಗಾರಿ ನಡೆಯುತ್ತಿರುವ ರೈಲು ಮಾರ್ಗಗಳಾವುವು;

ಇ) ಬಿಜಾಪುರ- ಗದಗ ರೈಲು ಮಾರ್ಗದ ಗೇಜ್ ಪರಿವರ್ತನೆ ಕಾಮಗಾರಿ ಕೆಲಸ ಯಾವ ಹಂತದಲ್ಲಿದೆ;

ಈ) ಇದನ್ನು ಯಾವಾಗ ಪ್ರಾರಂಭಿಸಲಾಯಿತು; ಯಾವಾಗ ಪೂರ್ಣಗೊಳಿಸಲು ಉದ್ದೇಶಿಸಿದೆ; (ವಿವರ ನೀಡುವುದು)

ಉ) ಇವುಗಳೆಲ್ಲದರ ಒಟ್ಟು ಮಾರ್ಗ ಎಷ್ಟು ಕಿ.ಮೀ. ಇದೆ; ಇದಕ್ಕಾಗಿ ನಿಗಧಿಪಡಿಸಿರುವ ಹಣವೆಷ್ಟು;

ಶ್ರೀ ಟಿ. ಜಾನ್ (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ರಾಜ್ಯ ಸಚಿವರು) :

ಅ) ಈ ಕೆಳಕಂಡ ರೈಲ್ವೆ ಮಾರ್ಗಗಳನ್ನು ಗೇಜ್ ಪರಿವರ್ತನೆಗಾಗಿ ಗುರುತಿಸಲಾಗಿದೆ:-

1. ಅರಸೀಕೆರೆ - ಹಾಸನ - ಮಂಗಳೂರು
2. ಮೈಸೂರು - ಚಾಮರಾಜನಗರ (ಮೊದಲನೇ ಹಂತ)
3. ಸೋಲಾಪುರ - ಗದಗ
4. ಶಿವಮೊಗ್ಗ ಟೌನ್ - ತಾಳಗುಪ್ಪ

ಆ) ಇವುಗಳಲ್ಲಿ ಮೈಸೂರು - ಚಾಮರಾಜನಗರ ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ. ಉಳಿದ ಯೋಜನೆಗಳು ಪ್ರಗತಿಯಲ್ಲಿರುತ್ತವೆ.

ಇ) ಸೋಲಾಪುರದಿಂದ ಬಿಜಾಪುರದವರೆಗಿನ ಗೇಜ್ ಪರಿವರ್ತನೆ ಈಗಾಗಲೇ ಮುಗಿದಿರುತ್ತದೆ. ಬಿಜಾಪುರದಿಂದ ಬಾಗಲಕೋಟೆಯವರೆಗಿನ 97 ಕಿ.ಮೀ ಉದ್ದದ ಮಾರ್ಗದ ಪರಿವರ್ತನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಮಾರ್ಗವು ಒಂದು ಪ್ರಮುಖ ಹಾಗೂ ಇನ್ನೊಂದು ದೊಡ್ಡ ಸೇತುವೆ ಕಾಮಗಾರಿ ಒಳಗೊಂಡಿರುತ್ತದೆ. ಇವುಗಳ ನಿರ್ಮಾಣ ಮುಕ್ತಾಯಗೊಂಡ ನಂತರ ಹಾಗೂ ಈ ಮಾರ್ಗ ಸಂಚಾರಕ್ಕೆ ಮುಕ್ತವಾದ ನಂತರ 93 ಕಿ.ಮೀ..ಉದ್ದದ ಬಾಗಲಕೋಟೆಯಿಂದ ಗದಗ್‌ವರೆಗಿನ ಪರಿವರ್ತನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಸೋಲಾಪುರ - ಗದಗ್‌ನ ಗೇಜ್ ಪರಿವರ್ತನಾ ಯೋಜನೆಯು ಜೂನ್ 1995ರಲ್ಲಿ ಪ್ರಾರಂಭಗೊಂಡಿತು ಹಾಗೂ ಇದು ಮಾರ್ಚ್ 2005ರ ಹೊತ್ತಿಗೆ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಉ) ಸೋಲಾಪುರ-ಗದಗ್ ಗೇಜ್ ಪರಿವರ್ತನೆಯ ಯೋಜನೆಯನ್ನು 50:50 ಪ್ರಮಾಣದ ವೆಚ್ಚವನ್ನು ರೈಲ್ವೆ ಮತ್ತು ರಾಜ್ಯ ಸರ್ಕಾರಗಳು ಭರಿಸುವ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಭಾರತ ಸರ್ಕಾರವು ರೂ. 20.00 ಕೋಟಿಗಳನ್ನು ಇದಕ್ಕೆ ಮೀಸಲಾಗಿರಿಸಿದ್ದು, ರಾಜ್ಯ ಸರ್ಕಾರವು ಕೂಡ ಸಮನಾದ ಮೊತ್ತವಾದ ರೂ. 20.00 ಕೋಟಿಗಳನ್ನು ಆಯವ್ಯದಲ್ಲಿ ಒದಗಣೆ ಮಾಡಲಾಗಿದೆ.

ಬಿಜಾಪುರ ಜಿಲ್ಲೆಯ ಡೋಣಿ ನದಿಯ ಹೂಳೆತ್ತುವ ಕಾಮಗಾರಿ

1004 (1285) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಡೋಣಿ ನದಿಯ ಹೂಳೆತ್ತುವ ಯೋಜನೆಯು ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು;

ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?